ಸಮುದ್ರ ಮಥನ




### ಸಕಾಲಿಕ ಲೇಖನ

'ಕನ್ನಡದ ನಟಿಯರು ಇಲ್ಲವೇ?' ರಘುನಾಥ ಚ.ಹ. ಅವರ ಮುಖಪುಟ ಲೇಖನ (ಸುಧಾ, ಮೇ 11) ಸಕಾಲಿಕ. ನಮ್ಮಲ್ಲೇ ಅಂದದ, ಪ್ರತಿಭಾವಂತ ನಟಿಯರು ಇದ್ದರೂ ಬಾಲಿವುಡ್ ನಟಿಯರಿಗೆ ಮಾನ್ಯತೆ ನೀಡುವುದು ಸರಿಯಲ್ಲ. ನಮ್ಮ ಪ್ರತಿಭೆಗಳಿಗೂ ಪ್ರೋತ್ಸಾಹ ಕೊಡಬೇಕು. ಆಗ ಮಾತ್ರ ಸ್ಯಾಂಡಲ್‌ವುಡ್ ಬೆಳೆಯಲು ಸಾಧ್ಯ.

—ಪಿ.ಗೋವಿಂದರಾಜ್ ಶಿವಮೊಗ್ಗ, ಬಿ.ಎಂ. ಶಿವಲಿಂಗೇಗೌಡ ಬೇವಿನಹಳ್ಳಿ

### ಎಂಥ ವಿಪರ್ಯಾಸ!

ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡ ಬಲ್ಲ ಪ್ರತಿಭಾವಂತ ನಟಿಯರೇ ಈಗೀಗ ಬಂದಿದ್ದಾರೆಂದು ಸಚಿತ್ರವಾಗಿ ವಿವರಿಸಿ 'ಕನ್ನಡ ನಟಿಯರು ಇಲ್ಲವೇ?' ಎಂದು ಶೀರ್ಷಿಕೆ ಇಟ್ಟಿದ್ದು ವಿಪರ್ಯಾಸ. 70–80ರ ದಶಕದ ನಾಯಕಿಯರಾದ ಲೀಲಾವತಿ, ಕಲ್ಪನಾ, ಜಯಂತಿ, ಭಾರತಿ, ಆರತಿ.. ಇಂತಹ ಮೇರು ನಟಿಯರ ಹೆಸರು ಉಲ್ಲೇಖಿಸಿದ್ದಾರಾದರೂ ದಾಖಲೆಗಾಗಿಯೂ ಅವರ ಒಂದು ಚಿತ್ರ ಹಾಕದಿದ್ದುದು ಒಂದು ಲೋಪವೆನಿಸಿತು. ಪರಭಾಷಾ ನಟಿಯರ ಅವಶ್ಯಕವಿಲ್ಲದಿದ್ದರೂ ಅವರಿಗೇ ಮಣೆ ಹಾಕುವ ಸ್ಯಾಂಡಲ್ ವುಡ್ ಸಂಸ್ಕೃತಿ ಈ ಹೊಸ ಪೀಳಿಗೆಯ ನಟಿಯರ ಆಗಮನದಿಂದ ದೂರವಾದೀತು ಎಂದು ಆಶಿಸೋಣ.

— ನಾಗೇಶ್ ಕುಮಾರ್ ಸಿ.ಎಸ್ ಚೆನ್ನೈ

### ಸಮಯೋಚಿತ

'ನಿಮ್ಮೊಡನೆ'ಯಲ್ಲಿ 'ಹಿಂದಿ ಹೇರಿಕೆ ಸಲ್ಲ' (ಬಿ.ಎಂ. ಹನೀಫ್) ಬರಹ ಸಮಯೋಚಿತವಾಗಿದೆ. ಲೇಖಕರು ಹೇಳಿದಂತೆ ಶೇ.70ರಷ್ಟು ರಾಜ್ಯಗಳಿಗೆ ಗಣರಾಜ್ಯ ತತ್ವಗಳಿಗೆ ವಿರುದ್ಧವಾದ ಈ ಹಿಂದಿ ಹೇರಿಕೆ ಕ್ರಮ ಮಾಡಿದ್ದು ಹೊಸ ಸಮಸ್ಯೆಗಳನ್ನು ಉಂಟು ಮಾಡುವುದು ಸರಿ. ರಾಜ್ಯದ ಮುಖಂಡರು, ಭಾಷಾ ತಜ್ಞರು ಜಾಗ್ರತೆ ವಹಿಸದಿದ್ದರೆ ಮುಂದೆ ತೊಂದರೆಗೊಳಗಾಗುವುದು ಖಂಡಿತ.

— ಗಾಣಧಾಳು ರಾಮಣ್ಣ ಚಿತ್ರದುರ್ಗ,
ಬಂಟ್ವಾಳ ಸೂರ್ಯನಾರಾಯಣರಾವ್ ಮಂಡ್ಯ,
ಎಂ.ಮೃತ್ಯುಂಜಯಪ್ಪ ಚಿತ್ರದುರ್ಗ, ಶ್ರೀನಾಥ್ ಕೊನೇಟಿ ಬೆಂಗಳೂರು

### ಮಕ್ಕಳ ಬೊಜ್ಜು

ಫಿಟ್‌ನೆಸ್ ಅಂಕಣದಲ್ಲಿ 'ಮಕ್ಕಳಿಗೆ ಬೇಡ ಬೊಜ್ಜಿನ ಭಾರ' (ಡಾ.ಎಂ.ಡಿ. ಸೂರ್ಯಕಾಂತ) ಬರಹ ಮಾಹಿತಿಪೂರ್ಣವಾಗಿದೆ. ಇಂದಿನ ಹಲವು ತಾಯಂದಿರನ್ನು ಗಮನಿಸಿದರೆ ಅವರಿಗೆ ತಮ್ಮ ಮಕ್ಕಳು ಏನನ್ನು ತಿಂದರೂ ಚೆಂದವೇ. ಜಂಕ್‌ಫುಡ್ ಇಷ್ಟಪಟ್ಟು ತಿಂದರೆ ಮಕ್ಕಳು 'ಮಾಡರ್ನ್' ಎಂಬ ಹೆಮ್ಮೆ ಬೇರೆ. ಈ ಮಧ್ಯೆ ಮಕ್ಕಳು ತಿಂದು ತಿಂದು ದಪ್ಪ ಆದರೂ ತಲೆಕೆಡಿಸಿಕೊಳ್ಳದವರೂ ಇದ್ದಾರೆ.

—ಕೋಟೇಶ್ವರ ಸೂರ್ಯನಾರಾಯಣರಾವ್ ಬೆಂಗಳೂರು

### ವಿಚಾರ ಲಹರಿ

'ವಿಚಾರ ಲಹರಿ'ಯಲ್ಲಿ (ಮೂಚಿ) ಪ್ರಜಾಪ್ರಭುತ್ವದ ಬಗೆಗಿನ ಅಭಿಪ್ರಾಯ ಚೆನ್ನಾಗಿದೆ. ಈ ದೇಶದಲ್ಲಿ ಹಣ ಬಲವಿದ್ದವರು ಪ್ರಜಾಪ್ರಭುತ್ವದ ನೇತಾರರಾಗುತ್ತಾರೆ. ನಂತರ ಜಾತಿಬಲ, ತೋಳ್ಬಲವಿದ್ದು ಗೆದ್ದವನೇ ನಿಜವಾದ ಪ್ರಭು.

—ಬಿ.ಎಸ್.ಎನ್.ರಾವ್ ಮಂಡ್ಯ

### ಫಾಲ್ಕೆ ಗರಿ

'ಕಲಾ ತಪಸ್ವಿಗೆ ಫಾಲ್ಕೆ ಗರಿ' (ಎನ್. ಉದಯಕುಮಾರ್) ಲೇಖನ ಓದಿ ಬಹಳ ಖುಷಿ ಹಾಗೂ ಹೆಮ್ಮೆ ಎನಿಸಿತು. ಭಾರತೀಯ ಚಿತ್ರರಂಗದಲ್ಲಿ ಅನೇಕ ಸಿನಿಮಾ ಮುತ್ತುಗಳನ್ನು ಕಟ್ಟಿಕೊಟ್ಟ ಕೆ. ವಿಶ್ವನಾಥ್ ಚಿತ್ರರಂಗದ 'ಅಪೂರ್ವ ಸಿರಿ' ಎಂದೇ ಹೇಳಬಹುದು.

—ಎಚ್.ಆನಂದಕುಮಾರ್ ಚಿತ್ರದುರ್ಗ, ಬಿ.ಎಂ.ಎಸ್ ಬೇವಿನಹಳ್ಳಿ,
ಎಸ್.ಲಕ್ಷ್ಮೀನರಸಿಂಹ ಚಾಮರಾಜನಗರ

### ಕಥೆಗಳು ಚೆನ್ನಾಗಿವೆ

'ಮುಡಿಯಿಂದ ಜಾರಿದ ಹೂವು' (ಎಲ್. ಗಿರಿಜಾರಾಜ್) ಕಥೆ ಹಾಗೂ 'ಸುಮುಹೂರ್ತೆ ಸಾವಧಾನ' (ಗೋಪಾಲಕೃಷ್ಣ ಹೆಗಡೆ–ಮಿನಿ ಕಥೆ) ಚೆನ್ನಾಗಿದ್ದವು.

—ಕೊಹಿಮ ಬಸರಕೋಡು, ಸುಂದರ್ ಬೆಂಗಳೂರು

### ಅಪಾಯಕ್ಕೆ ಆಹ್ವಾನ

ಬಾಲಿವುಡ್ ಅಂಕಣದಲ್ಲಿ ಬಾಹುಬಲಿ ಚಿತ್ರದ ನಾಯಕ ನಟ ಪ್ರಭಾಸ್ ತಮ್ಮ ದೇಹದ ತೂಕವನ್ನು 80 ಕೆಜಿಯಿಂದ 200 ಕೆಜಿಗೆ ಏರಿಸಿಕೊಂಡ ಎಂದು ಹೇಳಲಾಗಿದೆ. ಆ ತೂಕವನ್ನು ಮತ್ತೆ ಇಳಿಸಿಕೊಂಡರೋ ಇಲ್ಲವೋ ತಿಳಿಯದು. ಹಾರ್ಮೋನ್ ಔಷಧಿ, ಇಂಜೆಕ್ಷನ್ ತೆಗೆದುಕೊಂಡು ಕೊಬ್ಬು ಹಾಗೂ ಪ್ರೊಟೀನ್ ವಿಪರೀತವಾದರೆ ಮಾತ್ರ ಈ ರೀತಿ ತೂಕ ಏರಲು ಸಾಧ್ಯ. ಇದರಿಂದ ಮುಂದೊಂದು ದಿನ ಅಂಗಾಂಗಗಳು ತಮ್ಮ ಕ್ಷಮತೆ ಕಳೆದುಕೊಂಡು ಅಕಾಲಿಕ ಮುಪ್ಪು ಅಡರಬಹುದು. ಇಂಥ ದುಸ್ಸಾಹಸ ಅಗತ್ಯವೇ ಎಂಬುದನ್ನು ಅವರೇ ನಿರ್ಧರಿಸಬೇಕು.

—ಡಾ.ಕೆ.ಕೆ. ಜಯಚಂದ್ರಗುಪ್ತ ಹಾಸನ

### ಚಕ್ರವ್ಯೂಹ ಉದ್ಯಾನ

ವಂಡರ್‌ಪುಟದಲ್ಲಿ 'ಸ್ಪೇನಿನಲ್ಲೊಂದು ಚಕ್ರವ್ಯೂಹ' (ಎಸ್.ಹೆಗಡೆ) ಬಹಳ ಸೊಗಸಾಗಿದೆ. ದೊಡ್ಡ ದೊಡ್ಡ ನಗರಗಳಲ್ಲಿ ಇಂಥದ್ದೊಂದು ಉದ್ಯಾನವನ ನಿರ್ಮಿಸಿದರೆ ನಿತ್ಯ ವಾಯುವಿಹಾರ ಮಾಡುವವರಿಗೆ ಅನುಕೂಲ. ನಗರದ ಸೌಂದರ್ಯವೂ ಹೆಚ್ಚುತ್ತದೆ. ಸರ್ಕಾರ ಈ ಬಗ್ಗೆ ಕೊಂಚ ಗಮನ ಹರಿಸಬಹುದಲ್ಲವೇ?

—ಮೇ.ಗೋ.ಸುಬ್ಬಣ್ಣ ಮೇಗರವಳ್ಳಿ

ಸಮಸ್ಯೆ ನಿಮ್ಮದು ಪರಿಹಾರ ನಮ್ಮದು
ದಕ್ಷಿಣ ಭಾರತದ ಜನರಲ್ಲಿ ಪ್ರಶಂಸೆಗಳಿಸಿರುವ ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಈಗಿನ ಕಾಲದಲ್ಲೂ ಜೀವಂತವಾಗಿರುವಂತಹ ಕೇರಳದ ಕೆಲವು ಪ್ರಾಚೀನ ವಿಸ್ಮಯ ವಿದ್ಯೆಗಳಿಂದ

ಶ್ರೀ ಸಾಯಿಬಾಬ ಉಪಾಸಕರು
ಕೇವಲ 5 ದಿನದಲ್ಲಿ
100% ಪರಿಹಾರ ಶತಸಿದ್ಧ
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
ಜೈಬಾಲಾಜಿ ಜ್ಯೋತಿಷ್ಯಂ ಬನಶಂಕರಿ ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ. ಬೆಂಗಳೂರು. 9620444460